ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 23–11–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಪುಸ್ತಕ ಬಿಡುಗಡೆ ಮತ್ತು ವಿಕ್ರಂ ಪ್ರಕಾಶನದ ವೆಬ್‌ಸೈಟ್ ಲೋಕಾರ್ಪಣೆ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

ವಿಕ್ರಂ ಪ್ರಕಾಶನದ ವತಿಯಿಂದ ಡಾ. ಡಿ.ವಿ.ಗುರುಪ್ರಸಾದ್ ವಿರಚಿತ "ಆಪರೇಷನ್ ತ್ರಿಶೂಲ ಒಸಾಮ ಬಿನ್ ಲಾಡೆನ್ ಪತ್ತೆ–ಹತ್ಯೆ" ಪುಸ್ತಕ ಬಿಡುಗಡೆ ಮತ್ತು ವಿಕ್ರಂ ಪ್ರಕಾಶನದ ವೆಬ್‌ಸೈಟ್ ಲೋಕಾರ್ಪಣೆ ಸಮಾರಂಭವನ್ನು ನವೆಂಬರ್ 26 ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಗರದ ಚಿತ್ರಕಲಾ ಪರಿಷತ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ನಗರದ ಪೊಲೀಸ್ ಆಯುಕ್ತರಾದ ಕಮಲ್ ಪಂತ್ ಅವರು ಪುಸ್ತಕ ಬಿಡುಗಡೆ ಮಾಡಲಿರುವರು. ಖ್ಯಾತ ಚಿಂತಕರು, ಲೇಖಕರು, ವಾಗ್ಮಿಗಳಾದ ಡಾ.ಗುರುರಾಜ ಕರಜಗಿ ಅವರು ಪುಸ್ತಕ ಪರಿಚಯ ಮತ್ತು ವೆಬ್‌ಸೈಟ್ ಉದ್ಘಾಟನೆ ಮಾಡಲಿದ್ದಾರೆ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್‌ನ ಉಪಾಧ್ಯಕ್ಷರಾದ ಟಿ.ಪ್ರಭಾಕರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಪುಸ್ತಕ ಕುರಿತು ಒಂದು ನೋಟ :**

ವಿಶ್ವ ಕಂಡ ಅತಿ ಭೀಕರ ಆತಂಕವಾದಿ ಒಸಾಮ ಬಿನ್ ಲಾದೆನ್ ಆತಂಕವಾದದತ್ತ ಒಲಿದಿದ್ದು ಹೇಗೆ? ಆತ ತನ್ನ ಮಾತೃಭೂಮಿಯಾದ ಸೌದಿ ಅರೇಬಿಯಾವನ್ನು ಬಿಟ್ಟು ಪಾಕಿಸ್ತಾನ/ಆಫ್ಘಾನಿಸ್ತಾನಕ್ಕೆ ಬಂದಿದ್ದೇಕೆ? ಅಮೆರಿಕ ಮತ್ತು ಅಮೆರಿಕನ್ನರ ಮೇಲೆ ಅವನಿಗೆ ದ್ವೇಷವೇಕೆ? ಆಫ್ಘಾನಿಸ್ತಾನದಿಂದ ರಷ್ಯನ್ನರನ್ನು ಓಡಿಸಲು ಅವನು ಅಮೆರಿಕದಿಂದ ಮತ್ತು ಪಾಕಿಸ್ತಾನದಿಂದ ಎಂತಹ ಸಹಾಯವನ್ನು ಪಡೆದ? ಪಾಕಿಸ್ತಾನಕ್ಕೂ ಒಸಾಮನಿಗೂ ಇದ್ದ ನಂಟೇನು? ಪಾಕಿಸ್ತಾನದ ಲಷ್ಕರ್ ಎ ತಯಬ್ಬಾಗೆ ಒಸಾಮ ಮಾಡಿದ ಸಹಾಯ ಸಹಕಾರಗಳೇನು? ಮೇಲಿನ ಎಲ್ಲ ಪ್ರಶ್ನೆಗಳಿಗೂ 'ಆಪರೇಷನ್ ತ್ರಿಶೂಲ' ಉತ್ತರ ನೀಡುತ್ತದೆ.

ಇದಲ್ಲದೆ ಅಮೆರಿಕದ ಮೇಲೆ 9/11 ರಂದು ನಡೆದ ದಾಳಿಗಳು ಹೇಗೆ ಯೋಜಿತವಾದವು? ಷಡ್ಯಂತ್ರ ರಚಿಸಿದ್ದು ಯಾರು? ಪಾಲ್ಗೊಂಡವರು ಯಾರು? ಅವರ ತರಬೇತಿ ಹೇಗಾಯಿತು ಇವುಗಳ ಬಗ್ಗೆ ವಿವರಗಳು ಇರುವುದಲ್ಲದೆ ದಾಳಿಯ ನಂತರ ಒಸಾಮನನ್ನು ಪತ್ತೆ ಮಾಡಲು ಅಮೆರಿಕ ಕೈಗೊಂಡ ಕ್ರಮಗಳೇನು ಮತ್ತು ಒಸಾಮನ ಅಂತಿಮ ಕ್ಷಣಗಳು ಹೇಗಿದ್ದವು ಎನ್ನುವುದನ್ನು ನಿವೃತ್ತ ಡಿ.ಜಿ.ಪಿ ಡಾ.ಡಿ.ವಿ,ಗುರುಪ್ರಸಾದ್ ಸರಳ ಸುಂದರ ಭಾಷೆಯಲ್ಲಿ ನಿರೂಪಿಸಿದ್ದಾರೆ. ಇದಲ್ಲದೆ ಅಲ್ ಖೈದಾ ಭಾರತದಲ್ಲಿ ಸದ್ಯ ಏನು ಚಟುವಟಿಕೆಗಳನ್ನು ನಡೆಸುತ್ತಿದೆ ಎನ್ನುವುದನ್ನೂ ತಿಳಿಸಿಕೊಟ್ಟಿದ್ದಾರೆ. ಆಪರೇಷನ್ ತ್ರಿಶೂಲ ಗುರುಪ್ರಸಾದರ 69ನೆಯ ಕೃತಿಯಾಗಿದೆ.

ಲೇಖಕರ ಅಪಾರ ಸಂಶೋಧನೆಯ ಫಲವಾಗಿ ರೂಪುಗೊಂಡಿರುವ ಈ ಕೃತಿಯ ಬಗ್ಗೆ ಅಂತರರಾಷ್ಟ್ರೀಯ ವ್ಯವಹಾರಗಳ ವಿಶ್ಲೇಷಕ ಪ್ರೇಮಶೇಖರ, ಹೀಗೆಂದಿದ್ದಾರೆ: "ನಮ್ಮ ತಲೆಮಾರೇ ಕಂಡ, ಕಾಣುತ್ತಿರುವ ಈ ರುದ್ರನಾಟಕವನ್ನು ಅದರೆಲ್ಲಾ ವಿವರಗಳ ಜತೆ ಕಣ್ಣಿಗೆ ಕಟ್ಟುವಂತೆ ನಮ್ಮ ಮುಂದೆ ಅನಾವರಣಗೊಳಿಸಿರುವುದು ಡಾ. ಡಿ.ವಿ. ಗುರುಪ್ರಸಾದರ ಈ ಕೃತಿಯ ಮಹತ್ವ. ಸಮಕಾಲೀನ ಜಾಗತಿಕ ಇತಿಹಾಸವನ್ನು ಒಂದು ಬೆಳಿಗ್ಗೆ ಊಹೆಗೂ ನಿಲುಕದಿದ್ದ ಬಗೆಯಲ್ಲಿ ತಿರುಚಿಬಿಟ್ಟ 9/11 ದಾಳಿಗಳ ಎಲ್ಲ ಆಯಾಮಗಳ ಸವಿವರಗಳೊಂದಿಗೆ ಆರಂಭವಾಗುವ ಈ ಕೃತಿ ನಂತರ ಆ ದಾಳಿಗಳ ತಯಾರಿಯ ಸೂಕ್ಷ್ಮ ವಿವರಗಳಲ್ಲಿ ಮುಂದುವರೆಯುತ್ತದೆ. ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಗುರುಪ್ರಸಾದರ ಹರಿತ ಮೆದುಳು ಮತ್ತು ಅದರಷ್ಟೇ ಹರಿತವಾದ ಲೇಖನಿಯ ಮೊದಲ ಪರಿಚಯ ನಮಗಾಗುವುದು ಅಲ್ಲೇ. ಆ ನಿರ್ಣಾಯಕ ಮಂಗಳವಾರದದಂದು ಅಮೆರಿಕಾದಲ್ಲಿ ಜರುಗಿದ ಘಟನಾವಳಿಗಳ ಕ್ಷಣಕ್ಷಣಗಳ ವಿವರಗಳನ್ನು ಅವರು ಕಟ್ಟಿಕೊಟ್ಟಿರುವ ಬಗೆ ಅತ್ಯಂತ ಪರಿಣಾಮಕಾರಿ.

ಅದೇ ಸಮಯದಲ್ಲಿ ಪಾಕಿಸ್ತಾನದಲ್ಲಿ ನಡೆದ ವಾರ್ತಾಲಾಪಗಳ ವಿವರಗಳನ್ನೂ ಸೂಕ್ತ ಸ್ಥಳದಲ್ಲಿ, ಸೂಕ್ತ ಪ್ರಮಾಣದಲ್ಲಿ ಅವರು ಹೊಂದಿಸಿರುವುದು ಇಡೀ ಪ್ರಕರಣದ ಸಂಪೂರ್ಣ ಚಿತ್ರವನ್ನು ಓದುಗರ ಮುಂದೆ ಕುತೂಹಲಕರ ಚಲನಚಿತ್ರವೊಂದರ ಬಗೆಯಲ್ಲಿ ತೆರೆದಿಡುತ್ತದೆ. ಕೊನೆಗೂ ಯಶಸ್ವಿಯಾಗಿ ಅಬ್ಬೊಟಾಬಾದ್ ನಗರದ ಹೊರವಲಯದಲ್ಲಿ ಅಮೆರಿಕನ್ ನೇವಿ ಸೀಲ್ "ಆಪರೇಷನ್ ನೆಪ್ಚೂನ್ ಸ್ಪಿಯರ್" ಕಾರ್ಯಾಚರಣೆಯಲ್ಲಿ ಅವನನ್ನು ಹತ್ಯೆಗೈದದ್ದನ್ನು ಹೇಳಿರುವ ಬಗೆ ರೋಚಕ ಚಲನಚಿತ್ರದ ಕೊನೆಯ ಭಾಗವನ್ನು ಕುರ್ಚಿಯಂಚಿನಲ್ಲಿ ಕೂತು ನೋಡಿದ ಅನುಭವ ನೀಡುತ್ತದೆ. ಇಡೀ ಕೃತಿಯಲ್ಲಿ ಉದ್ದಕ್ಕೂ ಕಾಣಸಿಗುವುದು ಅದರ ರಚನೆಯಲ್ಲಿ ಗುರುಪ್ರಸಾದರು ತೋರಿರುವ ನಿಷ್ಠೆ. ಕೃತಿರಚನೆಯ ಪೂರ್ವತಯಾರಿಯಾಗಿ ಅವರು ಕೈಗೊಂಡ ಅಧ್ಯಯನ, ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಗಮನವಿಟ್ಟು ಸಂಗ್ರಹಿಸಿರುವ ಬಗೆ, ಅವುಗಳನ್ನು ವಿಶ್ಲೇಷಿರುವ ಪರಿ ಮತ್ತು ಅವೆಲ್ಲವನ್ನೂ ಒಟ್ಟುಗೂಡಿಸಿ ಸಮಗ್ರ ಚಿತ್ರವನ್ನು ರೂಪಿಸಿರುವ ಕೌಶಲ ಗಮನ ಸೆಳೆಯುತ್ತವೆ; ಈ ಎಲ್ಲಾ ದೃಷ್ಟಿಗಳಲ್ಲಿ ಈ ಕೃತಿ ಸಮಕಾಲೀನ ಜಾಗತಿಕ ಇತಿಹಾಸದ ಬಗ್ಗೆ ಕನ್ನಡದಲ್ಲಿ ಬಂದಿರುವ ಅತ್ಯಂತ ಮಹತ್ವದ ಆಕರಗ್ರಂಥವಾಗಿದೆ."

## ವಿಜ್ಞಾನ ವೀಡಿಯೋ ಚಿತ್ರೀಕರಣ ತರಬೇತಿ ಕಾರ್ಯಾಗಾರ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ವಿಜ್ಞಾನ ಪ್ರಸಾರ್ ಸಂಸ್ಥೆಯ ಸಹಯೋಗದೊಂದಿಗೆ **ವಿಜ್ಞಾನ ವೀಡಿಯೋ ಚಿತ್ರೀಕರಣ** ತರಬೇತಿ ಕಾರ್ಯಾಗಾರವನ್ನು 2021ರ ನವೆಂಬರ್ 23 ರಿಂದ 25ರವರೆಗೆ (ಮಂಗಳವಾರ ದಿಂದ ಗುರುವಾರದ ವರೆಗೆ) ಆಯೋಜಿಸಲಾಗಿದೆ.

ಕಾರ್ಯಾಗಾರದ ಉದ್ಘಾಟನಾ ಸಮಾರಂಭವನ್ನು 2021ರ ನವೆಂಬರ್ 23ರಂದು ಬೆಳಗ್ಗೆ 10 ಗಂಟೆಗೆ ಅಕಾಡೆಮಿ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಖ್ಯಾತ ಚಲನಚಿತ್ರ ನಿರ್ದೇಶಕರು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ. ಎಸ್. ನಾಗಾಭರಣ ಅವರು ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿಜ್ಞಾನ ಪ್ರಸಾರ್ ಸಂಸ್ಥೆಯ ಪ್ರಧಾನ ವಿಜ್ಞಾನಿ ನಿಮಿಷ್ ಕಪೂರ್ ಅವರು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದು, ಅಕಾಡೆಮಿ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಹೆಸರಾಂತ ವಿಜ್ಞಾನ ಲೇಖಕ ಕೊಳ್ಳೇಗಾಲ ಶರ್ಮಾ ಸಮಾರಂಭದಲ್ಲಿ ಉಪಸ್ಥಿತರಿರುವರು.

ಕಾರ್ಯಾಗಾರದಲ್ಲಿ ಹೆಸರಾಂತ ಛಾಯಾಗ್ರಾಹಕರು ಮತ್ತು ದಿಗ್ದರ್ಶಕರು ಉಪನ್ಯಾಸ ಮತ್ತು ತರಬೇತಿಯನ್ನು ನೀಡಲಿದ್ದು, ವಿಜ್ಞಾನ ಮತ್ತು ಪತ್ರಿಕೋದ್ಯಮ ವಿಷಯದ ವಿದ್ಯಾರ್ಥಿಗಳು ಮತ್ತು ಯುವ ಪದವೀಧರರನ್ನೊಳಗೊಂಡ 80 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆಯಡಿ ಮೃಗಾಲಯದ ಪ್ರಾಣಿ ಪಕ್ಷಿಗಳನ್ನು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ಸ್ತ್ರೀಪರ್ಡ್ ಕೀಲ್‌ಬ್ಯಾಕ್ ಹಾವು, ಕಾಮನ್ ಬರ್ನ್ ಔಲ್, ನೈಲ್ ಮೊಸಳೆ, ಪೇಂಟೆಡ್ ಸ್ಟಾರ್ಕ್, ಆಫ್ರಿಕನ್ ಸ್ಲೆಂಡರ್ ಸ್ನೋಟೆಡ್ ಮೊಸಳೆ ಮತ್ತು ಕೆರೆ ಹಾವು ಪ್ರಾಣಿಗಳನ್ನು ಮೈಸೂರಿನ ಎ.ಕೃಷ್ಣ ಅವರು ದತ್ತು ಪಡೆದಿರುವುದಕ್ಕೆ ಶ್ರೀಚಾಮರಾಜೇಂದ್ರ ಮೃಗಾಲಯ, ಮೈಸೂರು ಅಭಿನಂದನೆಗಳನ್ನು ಸಲ್ಲಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕಂದಾಯ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

ಕಂದಾಯ ಸಚಿವರು ಹಾಗೂ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಉಪಾಧ್ಯಕ್ಷರಾದ ಆರ್.ಅಶೋಕ ಅವರು ನವೆಂಬರ್ 24 ರಂದು ಹಾಸನ, ಮಂಡ್ಯ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಆಗಮಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ವಿಧಾನಸಭೆ ಅಧಿವೇಶನ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

15ನೇ ವಿಧಾನಸಭೆಯ ಹನ್ನೊಂದನೇ ಅಧಿವೇಶನವು ಡಿಸೆಂಬರ್ 13, 2021 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕಾಲೇಜು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿಗೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಮಂಜಪ್ಪ ಡಿ. ಹೊಸಮನೆ ಚಾಲನೆ

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವು ಕರ್ನಾಟಕ ಸರ್ಕಾರ ನಡೆಸಲಿರುವ ಕಾಲೇಜು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿ ಶಿಬಿರವನ್ನು ಆಯೋಜಿಸಿದ್ದು, ನವೆಂಬರ್ 24 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾವೇರಿ ಸಭಾಂಗಣದಲ್ಲಿ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಮಂಜಪ್ಪ ಡಿ. ಹೊಸಮನೆ ಅವರು ತರಬೇತಿ ಶಿಬಿರವನ್ನು ಉದ್ಘಾಟಿಸಲಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅವರ ಮಾರ್ಗದರ್ಶನದಲ್ಲಿ ನಡೆಯಲಿರುವ ಈ ತರಬೇತಿ ಕಾರ್ಯಕ್ರಮಕ್ಕೆ ನಾಡಿನ ಹಿರಿಯ ಪತ್ರಕರ್ತರೂ ಕನ್ನಡ ಪ್ರಭ ದಿನಪತ್ರಿಕೆ ಬ್ಯೂರೋ ಮುಖ್ಯಸ್ಥರಾದ ಅಂಶಿಪ್ರಸನ್ನಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ತರಬೇತಿ ಪಡೆಯುವವರಿಗೆ ಮಾರ್ಗದರ್ಶನ ನೀಡುವರು. ಸಮಾರಂಭದಲ್ಲಿ ಕುಲಸಚಿವ ಪ್ರೊ. ಆರ್. ರಾಜಣ್ಣ ಉಪಸ್ಥಿತರಿರುವರು.

ಕರಾಮುವಿ ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷಾ ತರಬೇತಿ ಶಿಬಿರವು ಅತ್ಯಂತ ಪ್ರಮುಖವಾಗಿದ್ದು, ಕಡ್ಡಾಯ ಇಂಗ್ಲೀಷ್, ಕಡ್ಡಾಯ ಕನ್ನಡ, ಸಾಮಾನ್ಯ ಜ್ಞಾನದ ಪತ್ರಿಕೆಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗುವುದು. ತರಬೇತಿಗೆ ಸೇರ ಬಯಸುವ ಅಭ್ಯರ್ಥಿಗಳಿಗೆ ಇನ್ನೂ ಕಾಲಾವಕಾಶವಿದ್ದು ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **0821 - 2515944** ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ**

ಬೆಂಗಳೂರು, ನವೆಂಬರ್ 23 (ಕರ್ನಾಟಕ ವಾರ್ತೆ):

**ದಿನಾಂಕ: 23.11.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 44 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 146 | ಸಾಧಾರಣ | $NO_2$ |
| 3 | ಕವಿಕ, ಮೈಸೂರುರಸ್ತೆ | 117 | ಸಾಧಾರಣ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 41 | ಉತ್ತಮ | CO |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 52 | ತೃಪ್ತಿಕರ | CO |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 84 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 33 | ಉತ್ತಮ | CO |
| **(23.11.2021 at 10.05 AM)** | | | | |
| 8 | BWSSB,ಕಾಡಬೀಸನಹಳ್ಳಿ | * | * | * |
| 9 | ಪೀಣ್ಯ | 60 | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | 49 | ಉತ್ತಮ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 23.11.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 44 | Good | $PM_{10}$ |
| 2 | Jayanagar 5th Block, Shalini ground | 146 | Moderate | $NO_2$ |
| 3 | KAVIKA, Mysore Road | 117 | Moderate | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 41 | Good | CO |
| 5 | HSR Layout, near Central Silkboard | 52 | Satisfactory | CO |
| 6 | City Railway Station, Magestic, Bengaluru | 84 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 33 | Good | CO |
| **(23.11.2021 at 10.05 AM)** | | | | |
| 8 | BWSSB, Kadabesanahalli | * | * | * |
| 9 | Peenya | 60 | Satisfactory | $PM_{2.5}$ |
| 10 | BTM Layout | 49 | Good | CO |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older adults | Severe (>401) | Respiratory effects even on healthy people |